ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ವೈ. ರಾಮಕೃಷ್ಣ : ಮಾನ್ಯ ಅಧ್ಯಕ್ಷರೇ, ವೋಟ್ ಆನ್ ಅಕೌಂಟ್‌ನ್ನು ಈಗ ಸಿಕ್ಸ್ ಮಂತ್ಸ್‌ಗೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮೂರು ತಿಂಗಳು ಆದಮೇಲೆ ಮತ್ತೆ ಸದನವನ್ನು ಕರೆಯುತ್ತೇವೆ ಎಂಬುದಾಗಿ ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.

ಶ್ರೀ ಸಿದ್ಧರಾಮಯ್ಯ : ಬರುವ ಜೂನ್‌ನಲ್ಲಿ ನಾವು ಮತ್ತೆ ಸದನವನ್ನು ಕರೆಯುತ್ತೇವೆ, ಎಂದು ಭರವಸೆ ಕೊಡುತ್ತೇನೆ.

(3) ಕರ್ನಾಟಕ ಧನ ವಿನಿಯೋಗ ವಿಧೇಯಕ, 1996 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿದ್ಧರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1996ನೇ ಸಾಲಿನ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ವೈ. ರಾಮಕೃಷ್ಣ : ನಮ್ಮ ಕಡೆಯಿಂದ ಅನೇಕ ತಿದ್ದುಪಡಿಗಳನ್ನು ನಾವು ಸೂಚಿಸಿದ್ದೇವೆ. ಆ ಬಗ್ಗೆ ಕೆಲವು ಆಶ್ವಾಸನೆಗಳನ್ನೂ ಕೂಡ ಮಾನ್ಯ ಮಂತ್ರಿಗಳು ಕೊಟ್ಟಿದ್ದಾರೆ. ಮುಂದೆ ಈ ಆಶ್ವಾಸನೆಗಳನ್ನು ಈಡೇರಿಸುವ ಬಗ್ಗೆ ಮಾನ್ಯ ಮಂತ್ರಿಗಳು ಸದನಕ್ಕೆ ಭರವಸೆ ಕೊಡಬೇಕು. ಅದರಲ್ಲೂ ವ್ಯವಸಾಯಗಾರರಿಗೆ ಯಾವ ಯಾವ ತೆರಿಗೆಗಳು ಎಂದು ಹೇಳಿದ್ದೇವೆ ಅವನ್ನೆಲ್ಲಾ ತಾವು ಪರಿಶೀಲನೆ ಮಾಡಿ ಮಂಡಿಸುತ್ತೇವೆ ಎಂಬ ಭರವಸೆ ಕೊಡಬೇಕು.

ಶ್ರೀ ಸಿದ್ಧರಾಮಯ್ಯ : ಸನ್ಮಾನ್ಯ ಹಿರಿಯ ಸದಸ್ಯರಾಗಿರತಕ್ಕ ರಾಮಕೃಷ್ಣರವರು ಹೇಳತಕ್ಕ ಸಲಹೆಗಳನ್ನು ನಾವು ಪರಿಶೀಲನೆ ಮಾಡುತ್ತೇವೆ.